ಮಹಮ್ಮದ್ ವುಮ್ಮತ್‌ಸಾಹೆಬರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೊಹದೀನ್‌ಸಾಬರ ಅರ್ಜೀಯನ್ನು 1887ನೇ ಇಸವಿ ಆಕ್ಟೋಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುತವಲಿ ಹಕೀಂ ಮಹಮ್ಮದ್ ವುಮ್ಮತ್ ಸಾಹೆಬರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಇಧೆ.

1887ನೇ ಇಸವಿ ಆಗಸ್ಟು ತಿಂಗಳು8ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಯಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್ ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ಶ್ರೀರಾಂಪೇಟೇಲಿರುವ ಸವಾರ್ ಇಲಾಖಾ 1ನೇ ರಿಜಮೆಂಟ್ 6ನೇ ರಿಸಾಲೆ ಪೇಷ್ಕಾರ್ ವಿಠಲರಾಯನ ವಿಷಯದಲ್ಲಿ—

ಸನ್ 1887ನೇ ಇಸವಿ ದಿವಾಳೀ ಕೇಸ್ ನಂಬರು 154.

ಹುಕ್ಕುಂ.

ಮೇಲ್ಕಂಡ ವಿಠಲರಾಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು, ಈ ಕೋರ್ಟು ರೂಬರೂ ಅರ್ಜೀದಾರನಾದ ವಿಠಲರಾಯನ ಪರವಾಗಿ ಫಸ್ಟ್‌ಗ್ರೇಡ್ ಪ್ಲೀಡರ್ ಮೆ|| ವೆಂಕೋಬರಾಯರನ್ನು ಮತ್ತು ಸದರೀಯವನ ಲೇಣೇದಾರ್ರಾದ 6ನೇ ಕೃಷ್ಣಮೂರ್ತಿರಾವ್ ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರೆಂದರೆ, 1ನೇ ವಡಿಸ್ವಾಮಿ ರಾಯಾಚಾರಿ 2ನೇ ರಂಗಪ್ಪ 3ನೇ ಶೇಷಗಿರಿರಾವ್, 4ನೇ ಮಾರವಾಡೀ ದೇವಾಜಿ ಜೋಲಾಜಿ. 5ನೇ ರಾಜಪ್ಪ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಪೇಷ್ಕಾರ್ ವಿಠಲರಾಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಪಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಜುಲೈ 27ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಶೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೀ ವುಂಟಾದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೋನಾದರೂ ಇದ್ದರೆ.	ಷರಾ.
1	ಶಿವಮೊಗ್ಗಾದಲ್ಲಿರುವ ವಡಿಸ್ವಾಮಿರಾಯಾಚಾರಿ	89 3 4		ಡಿಕ್ರೀ ಬಾಬತು	

ದಿವಾಳಿಯಾದ ಡಿಕ್ರೀ ದೇಣೇದಾರಳು ಶ್ರೀರಂಗಪಟ್ನ ತಾಲ್ಲೂಕು ಕ್ಯಾತನಹಳ್ಳೀ ಹೋಬಳಿ ಕಡತನಾಳು ಗ್ರಾಮದಲ್ಲಿರುವ

ಅಕ್ಕಮ್ಮನ ವಿಷಯದಲ್ಲಿ—

ಸನ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 57.

ಹುಕ್ಕುಂ.

ಮೇಲ್ಕಂಡ ಅಕ್ಕಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟಿನ ರೂಬರೂ ಅರ್ಜೀದಾರಳಾದ ಅಕ್ಕಮ್ಮನ ಪರವಾಗಿ ಅಡ್ವೋಕೇಟ್ ಮ|| ನಾರಣಯ್ಯಂಗಾರ್ರವನ್ನು ಮತ್ತು ಸದರೀಯವಳ ದೇಣೇದಾರ್ರಾದ 1ನೇ ಲಿಂಗೇಗೌಡ 2ನೇ ಚನ್ನಲಿಂಗೇಗೌಡನ ಲಿಂಗೇಗೌಡ, 3ನೇ ಮರಿಪುಟ್ಟೇಗೌಡ ಖುದ್ದು ಹಾಜರು 7ನೇ ಕೊಮಾರಯ್ಯನಕಡೆ ಅಡ್ವೋಕೇಟ್ ಮ|| ಡಿ, ಸಾಹೆಬರು ಯಿವರಿಗೂ ದರ್ಯಾಪ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ದೇಣೇದಾರ್ರು ತಮಗೆ ಈ ದರ್ಯಾಪ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ, ಅಥವಾ ಲಾಯರ್ ಮೂಲಕನಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರೆಂದರೆ, 4ನೇ ಲಿಂಗ 5ನೇ ನಂಜಿ 6ನೇ ಜವರೇಗೌಡನ ಲಿಂಗೇಗೌಡ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಅಕ್ಕಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಜುಲೈ 27ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ಸಮ್ಮ ದಸ್ತಖತ್‌ನಿಸೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ದೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣಿಗೆ ಬಂದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಶ್ರೀರಂಗಪಟ್ಣ ತಾಲ್ಲೂಕು ಕಡತನಾಳಲ್ಲಿರುವ ಲಿಂಗೇಗವುಡ.	180 0 0	..	ಆಧಾರ ತಮಸೂಕು ಬಾಬತು	
2	ಡಿಟೋ ಪೂರು ಚನ್ನಲಿಂಗೇಗವುಡನ ಲಿಂಗೇಗವುಡ	25 0 0	..	ನಗದು ಲೇವಾದೇವೀ ತಮಸೂಕು ಬಾಬತು	
7	ಶ್ರೀರಂಗಪಟ್ಣದಲ್ಲಿರುವ ಕೊಮಾರಯ್ಯ ಪ್ಲೀಡರ್	32 0 0	..	ಡಿಕರೀ ಬಾಬತು	
		237 0 0			

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ನಂ. 9.

ತಾರೀಖು 12ನೇ ಆಗಸ್ಟ್ 1887.

ಯಡತೊರೇ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ಸೂಚಿಸಿರುವ ದಸ್ತೈವಜುಗಳನ್ನ ಕ್ರಮವಾದ ವಾರಸ್ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸು ಪಡಿಯಬೇಕು ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 35ನೇ ಸೆಕ್ಷನ್ ಮೇರೆಗೆ ನಾಶಪಡಿಸಲ್ಪಡುತ್ತೆ:—